# ವೃತ್ತಿಗೌರವ ಹೆಚ್ಚಿಸಿದ ಸರ್ಕಾರಿ ಶಾಲೆಯ ಮಕ್ಕಳು

**■ ಮಧುರಾಣಿ ಎಚ್.ಎಸ್.**



ಸರ್ಕಾರಿ ಶಾಲೆಯ ಮಕ್ಕಳೊಂದಿಗೆ ಮಧುರಾಣಿ ಟೀಚರ್

ಸ್ವಾಗತಕಾರಿಣಿಯಿಂದ ಹಿಡಿದು ಸಹಾಯಕ ಪ್ರಾಧ್ಯಾಪಕಿಯವರೆಗೆ ಹಲವು ಉದ್ಯೋಗ ಮಾಡಿದ ನಾನು ಈಗ ಅಧ್ಯಾಪಕ ವೃತ್ತಿಯನ್ನೇ ನನ್ನದಾಗಿಸಿಕೊಂಡಿದ್ದೇನೆ. ಇಲ್ಲಿ ನಾನು ಕಲಿಸಿದ್ದಕ್ಕಿಂತ ವೃತ್ತಿ ನನಗೆ ಕಲಿಸಿರುವುದೇ ಹೆಚ್ಚು.

ಹತ್ತು ವರ್ಷಗಳ ಕೆಳಗೆ ಬೆಂಗಳೂರಿನ ಎನ್‌ಜಿಒ ಒಂದರ ಭಾಗವಾಗಿ ಸರ್ಕಾರಿ ಶಾಲೆಗಳಲ್ಲಿ ಸಂಜೆ ಹೊತ್ತು ಸ್ಪೋಕನ್ ಇಂಗ್ಲಿಷ್ ಕಲಿಸುತ್ತಿದ್ದೆವು. ಸಂಜೆಯವರೆಗೂ ನನ್ನ ಪ್ರಾಧ್ಯಾಪಕ ವೃತ್ತಿ ಮುಗಿಸಿ ಸರ್ಕಾರಿ ಶಾಲೆಯ ಆವರಣಕ್ಕೆ ಬಂದರೆ, ಅದಾಗಲೇ ಆ ಮಕ್ಕಳು ತಮ್ಮ ಶಾಲೆ ಮುಗಿಸಿ ನಮಗಾಗಿ ಕಾಯುತ್ತಾ ಕೂತಿರುತ್ತಿದ್ದರು. ಅದುವರೆಗೆ ಶ್ರೀಮಂತ ವರ್ಗದ ಮಕ್ಕಳಿಗೆ ಪಾಠ ಮಾಡಿ ಬರುತ್ತಿದ್ದ ನನಗೆ ಇಲ್ಲಿ ಏಕದಂ ಬೇರೆಯದೇ ಪ್ರಪಂಚ ಹೊಕ್ಕಂತಾಗುತ್ತಿತ್ತು. ಆದರೆ ಈ ಮಕ್ಕಳಲ್ಲಿದ್ದ ಕಲಿಕೆಯ ಹಸಿವು ಅವರ ಅನ್ನದ ಹಸಿವಿಗಿಂತಲೂ ಹೆಚ್ಚಾಗಿರುತ್ತಿತ್ತು.

ಕಾಲೇಜಿನಲ್ಲಾದರೆ 'ಬಂದು ಏನೋ ಒಂದು ಹೇಳಿ ಹೋಗಲಿ' ಎಂಬ ತಾತ್ಸಾರದ ಮುಖಗಳ ನೀರಸ ಪ್ರತಿಕ್ರಿಯೆ ಅನುಭವಿಸಿ ಬರುತ್ತಿದ್ದ ನನಗೆ ಇಲ್ಲಿ ಬಂದೊಡನೆ ಒಂದು ಸ್ವರ್ಗ ಹೊಕ್ಕ ಅನುಭವವಾಗುತ್ತಿತ್ತು. ಏನೇ ಕಲಿಸಿದರೂ ಶ್ರದ್ಧೆಯಿಂದ ಕಲಿಯುತ್ತಿದ್ದ, ಕೇಳಿದ ಪ್ರಶ್ನೆಗೆ ಎದ್ದುನಿಂತು ಮುದ್ದುಮುದ್ದಾಗಿ ಉತ್ತರಿಸುತ್ತಿದ್ದ ಈ ಮಕ್ಕಳು ದೇವರಂತೆಯೇ ಕಾಣುತ್ತಿದ್ದರು. ಗರ್ವ ಮತ್ಸರ ನಿರ್ಲಕ್ಷ್ಯ ಲವಲೇಶವೂ ಇಲ್ಲದ ಇವರ ಗುಣ ಆಶ್ಚರ್ಯವೆನಿಸುತ್ತಿತ್ತು.

ಕೋರ್ಸ್ ಮುಗಿದ ನಂತರ ಅವರೆಲ್ಲರನ್ನು ಕೇರಳಕ್ಕೆ ಪ್ರವಾಸ ಕರೆದೊಯ್ದೆವು. ಆಗಂತೂ ಎಲ್ಲರೂ ಖುಷಿಯಿಂದ ಕುಪ್ಪಳಿಸಿಬಿಟ್ಟರು. ಎಷ್ಟೋ ಜನರಿಗೆ ಅದು ಅವರ ಬದುಕಿನ ಮೊದಲ ಪ್ರವಾಸವಾಗಿತ್ತು. ಅಲ್ಲಿ ನಾವೂ ಅವರೊಂದಿಗೆ ಮಕ್ಕಳಾಗಿ ಬಿಟ್ಟೆವು. ಇದೆಲ್ಲಾ ಕಳೆದು ಸುಮಾರು ಹತ್ತು ವರ್ಷಗಳೇ ಆಗಿದ್ದರೂ ಆ ಮಕ್ಕಳು ಕಲಿಸಿದ ಬದುಕಿನ ಪಾಠಗಳನ್ನು ನಾನು ಇಂದೂ ಮರೆತಿಲ್ಲ. ಗುರುಪೂರ್ಣಿಮೆಯಂದು ಅಭಿನಂದನೆ ಹೇಳುವುದನ್ನು ಆ ಮಕ್ಕಳು ಸಹಾ ಇಂದಿಗೂ ಮರೆತಿಲ್ಲ. ಈ ವೃತ್ತಿಯಲ್ಲಿ ಗಳಿಸುವ ಹಣಕ್ಕೆ ಮೀರಿದ ಅರ್ಥವಿದೆ ಅನಿಸಿದ್ದು ನನಗೆ ಅದೇ ಮೊದಲು. ಹಣಕ್ಕೆ ನಿಲುಕದ ಪಾಠಗಳನ್ನು ದಿನವೂ ಕಲಿಸುತ್ತಿರುವ ಈ ವೃತ್ತಿಯ ಬಗೆಗೆ ಅಪಾರ ಹೆಮ್ಮೆಯಿದೆ. ■

# ದೀರ್ಘಕಾಲ ಕಾಡಿದ ನೋವು

**■ ನಾಗರಾಜ ಎ.ಕೆ.**

ಕನ್ನಡ ಶಿಕ್ಷಕ, ಕರ್ನಾಟಕ ಪಬ್ಲಿಕ್ ಸ್ಕೂಲ್ ಕೋಣಂದೂರು, ತೀರ್ಥಹಳ್ಳಿ

'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುತ್ತದೆ' ಎಂಬ ಜನಪದರ ವಾಣಿ ಅಕ್ಷರಶಃ ನಿಜ. ಎದೆಗೆ ಬಿದ್ದ ಅಕ್ಷರ ಫಲ ನೀಡಲು ಗುರುವಿನ ಮಾರ್ಗದರ್ಶನ ಅಗತ್ಯವಿದೆ. ನಾನು ಶಿಕ್ಷಕನಾಗಬೇಕೆಂಬ ಯಾವುದೇ ಗುರಿಯಿಲ್ಲದ ದಿನಗಳಲ್ಲಿ, ನನ್ನಲ್ಲಿ ಆ ವೃತ್ತಿಯ ಕುರಿತು ಒಲವು ಮೂಡಿಸಿದವರು ನನ್ನ ಶಿಕ್ಷಕರು. ಪ್ರಾಥಮಿಕ ಶಾಲೆಯಲ್ಲಿ ಮಾತೃಹೃದಯಿ ಸಂಧ್ಯಾರಾಣಿ ಜಾನಿ ಡಿಸೋಜಾ, ಜಬಿವುಲ್ಲಾ ಎಮ್.ಕೆ., ಶಿವಪ್ಪ. ಪ್ರೌಢಶಾಲೆಯಲ್ಲಿ ಜಿ. ರುದ್ರಪ್ಪ. ಕಾಲೇಜಿನಲ್ಲಿ ಶಿವಕುಮಾರ್, ಎಂ.ಆರ್. ದತ್ತಾತ್ರೇಯ, ಡಾ. ಶೇಖರ್, ಡಾ. ಬಿ.ವಿ. ವಸಂತ ಕುಮಾರ್ ಅವರ ಬೋಧನಾ ಶೈಲಿ, ತಾರತಮ್ಯ ಮಾಡದ ವ್ಯಕ್ತಿತ್ವ, ವಿದ್ಯಾರ್ಥಿಗಳಿಗೆ ಅವರು ನೀಡುವ ಸಲಹೆ, ಮಾರ್ಗದರ್ಶನ ನಾನೂ ಶಿಕ್ಷಕನಾಗಬೇಕೆಂಬ ಹಂಬಲವನ್ನು ಗಟ್ಟಿಗೊಳಿಸಿತು.



ಪರೀಕ್ಷಾ ಮೇಲ್ವಿಚಾರಣೆಯಲ್ಲಿ ನಾಗರಾಜ ಎ.ಕೆ.

ನಾನು ಪ್ರೌಢಶಾಲಾ ಶಿಕ್ಷಕನಾಗಿ 2006ರಲ್ಲಿ ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕಿನ ಕುದುರೆಗುಂಡಿಯ ಸರ್ಕಾರಿ ಪ್ರೌಢಶಾಲೆಗೆ ಬಂದೆ. ಅಲ್ಲಿ ಕೆಲಸ ಮಾಡಿದ ಅವಧಿ ಕಡಿಮೆ. ಆದರೂ ನನ್ನ ವೃತ್ತಿ ಬದುಕಿನ ವಿಶೇಷ ನೆನಪುಗಳು ಹಲವು ಸ್ಥಿರಗೊಂಡಿವೆ.

ನಮ್ಮ ಶಾಲೆಗೆ ಹತ್ತಿರದ ಸಿದ್ದರಮಠ ಎಂಬ ಊರಿನಲ್ಲಿ 'ಪ್ರೌಢಶಾಲಾ ಮಕ್ಕಳ ಪ್ರತಿಭಾ ಕಾರಂಜಿ' 2009ರಲ್ಲಿ ಆಯೋಜನೆಯಾಗಿತ್ತು. ಅಲ್ಲಿಗೆ ನಮ್ಮ ಶಾಲೆಯ ಮಕ್ಕಳನ್ನು ಕರೆದುಕೊಂಡು ಹೋಗುವ ಜವಾಬ್ದಾರಿ ನನ್ನ ಪಾಲಿಗೆ ಬಂತು. ಮಕ್ಕಳನ್ನು ಕರೆದುಕೊಂಡು ಹೋಗಲು ಒಂದು ಆಟೋ ಗೊತ್ತು ಮಾಡಿದೆ. ಕಾಡು ದಾರಿಯಲ್ಲಿ ಹೋದರೆ ನಮ್ಮ ಶಾಲೆಯಿಂದ ಸಿದ್ದರಮಠಕ್ಕೆ ಬರೀ ಐದು ಕಿ.ಮೀ. ಅದೇ ಕೊಪ್ಪ ಮಾರ್ಗವಾಗಿ ಹೋದರೆ ಸುಮಾರು ಹದಿನೈದು ಕಿ.ಮೀ. ಆಗುತ್ತದೆ. ಹಾಗಾಗಿ ಹತ್ತಿರದ ಹಾದಿಯನ್ನು ಆಯ್ಕೆಮಾಡಿಕೊಂಡೆ. ರಸ್ತೆ ಹೆಸರಿಗೆ ಮಾತ್ರ ಇದೆ ಎನ್ನುವುದು ಅಲ್ಲಿಗೆ ಹೋದಾಗಲೇ ಗೊತ್ತಾಗಿದ್ದು. ಹೋಗುವಾಗ ಸಣ್ಣ ಅಪಘಾತವಾಯಿತು. ನನ್ನನ್ನೂ ಸೇರಿದಂತೆ ಗಾಡಿಯಲ್ಲಿದ್ದ ಮಕ್ಕಳಿಗೆ ಸಣ್ಣ ಪುಟ್ಟ ಗಾಯಗಳಾದವು. ನಮ್ಮ ಗಣಿತ ಶಿಕ್ಷಕ ಮತ್ತು ನನ್ನ ವಿದ್ಯಾರ್ಥಿಯೊಬ್ಬರ ಕೈ ಮುರಿಯಿತು. ಈ ವಿಷಯ ಕಾಡ್ಗಿಚ್ಚಿನಂತೆ ಊರಿನಲ್ಲಿ ಹಬ್ಬಿತು. ಕೆಲವೇ ಗಂಟೆಗಳಲ್ಲಿ ಪೋಷಕರು ಸೇರಿಕೊಂಡರು. ಸಕಾಲಕ್ಕೆ ಎಲ್ಲರಿಗೂ ಚಿಕಿತ್ಸೆ ನೀಡಲಾಯಿತು.

ಸಹಜವಾಗಿಯೇ ನನ್ನಲ್ಲಿ ಆತಂಕ ಮನೆ ಮಾಡಿತ್ತು. ಯಾವಾಗ ಏನಾಗಬಹುದು ಎಂಬ ಅಂಜಿಕೆಯಿಂದಲೇ ಶಾಲೆಗೆ ಬರತೊಡಗಿದೆ. ಸುಮಾರು ದಿನಗಳಾದರೂ ಯಾವ ಪೋಷಕರಾಗಲಿ, ಎಸ್.ಡಿ.ಎಂ.ಸಿ. ಸದಸ್ಯರಾಗಲಿ ಈ ವಿಷಯದ ಬಗ್ಗೆ ಎಂದೂ ಪ್ರಶ್ನಿಸಲಿಲ್ಲ. ಪಾಪಪ್ರಜ್ಞೆಯ ಪಶ್ಚಾತ್ತಾಪದಲ್ಲಿ ಇದ್ದ ನಾನು ಕೆಲ ದಿನಗಳ ನಂತರ ಕೆಲವರ ಬಳಿ ಆ ಬಗ್ಗೆ ಮಾತನಾಡಿದೆ. ಅವರಿಂದ ಬಂದ ಉತ್ತರದಿಂದ ನನಗೆ ಆಶ್ಚರ್ಯ ಮತ್ತು ನನ್ನ ವೃತ್ತಿ ಬಗ್ಗೆ ಇದ್ದ ಅಭಿಮಾನ, ಗೌರವ ಹೆಚ್ಚಾಯಿತು. 'ನಾಗರಾಜ ಸರ್‌ಗೆ ಮಕ್ಕಳನ್ನು ಕರೆದುಕೊಂಡು ಹೋಗುವ ಜವಾಬ್ದಾರಿ ಇತ್ತು. ಆತ ಒಳ್ಳೆಯ ಶಿಕ್ಷಕ. ಏನೋ ಸಣ್ಣ ಪ್ರಮಾದವಾಗಿದೆ' ಎಂದು ಅವರು ಭಾವಿಸಿದ್ದು ಗೊತ್ತಾಯಿತು. ಪ್ರಾಮಾಣಿಕ ಮತ್ತು ನಿಷ್ಠೆಯ ಕೆಲಸದಿಂದ ಈ ಗೌರವ ಎಂದು ಮಕ್ಕಳಿಗೂ ಅವರ ಪೋಷಕರಿಗೂ ವಂದಿಸಿದೆ. ■